ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಪಾಂಡವಪುರ

ಅಸಲು ದಾವೆ ನಂ: **168/2020**

ಡಿ.ಡಬ್ಲ್ಯೂ: **1**

ದಿನಾಂಕ: 09-06-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು :: ವಾದಿ ಪರ ಶ್ರೀ ಕೆ ಎಂ ಆರ್ ವಕೀಲರಿಂದ

ನಾನು 7 ನೇ ತರಗತಿ ವರೆಗೂ ಓದಿರುತ್ತೇನೆ. ಕನ್ನಡ ಓದಲು ಬರೆಯಲು ಬರುತ್ತದೆ . ನನ್ನ ಪ್ರಮಾಣಪತ್ರದ ಸಂಗತಿಗಳು ನನಗೆ ಗೊತ್ತು. ದಾವಾಗೆ ನೀವು ಸಲ್ಲಿಸಿರುವ ಲಿಖಿತ ತಕರಾರಿನ ಸಂಗತಿಗಳು ನಿಮಗೆ ಗೊತ್ತೇ ಎಂದರೆ ನನಗೆ ನೆನಪಿಲ್ಲ. ವಾದಿ ಸಲ್ಲಿಸಿರುವ ದಾವೆಯ ಸಂಗತಿಗಳುನಿಮಗೆ ಗೊತ್ತೇ ಎಂದರೆ ಗೊತ್ತಿಲ್ಲ. ವಾದಿ ಸಾಕ್ಷ್ಯದಲ್ಲಿ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತು ನಿಮ್ಮ ಹೆಸರಿನಲ್ಲಿ ನಿಮ್ಮ ಒಟ್ಟು ಕುಟುಂಬದ ಒಳಿತಿಗಾಗಿ ಮಂಜೂರು ಆಗಿರುತ್ತದೆ ಎಂದರೆ ಸರಿ , ಸಾಕ್ಷಿ ಮುಂದುವರೆದು ನನ್ನ ಮೊದಲು ನನ್ನ ತಂದೆ ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿದ್ದರು ನಂತರ ನಾನು ಮತ್ತು ವಾದಿ ಅವರ ಜೊತೆ ಸೇರಿ ದಾವಾ ಸ್ವತ್ತನ್ನು ಉಳುಮೆ ಮಾಡಲುಆರಂಭಿಸಿದೆವು ನಂತರ ದಾವಾ ಸ್ವತ್ತು ನಮ್ಮ ಕುಟುಂಬಕ್ಕೆ ಮಂಜೂರಾಗಿರುತ್ತದೆ .

ಈಗಲೂ ಸಹ ದಾವಾ ಸ್ವತ್ತನ್ನು ನೀವು ಹಾಗೂ ವಾದಿ ಜಂಟಿಯಾಗಿ ಉಳುಮೆ ಮಾಡುತ್ತಿರುವಿರಿ ಎಂದರೆ ಸರಿ. ದಾವಾ ಸ್ವತ್ತು 2 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಎಂದಿಗೂ ಇದ್ದಿಲ್ಲ ಎಂದರೆ ಸರಿ. ಸರ್ಕಾರದವರು ದಾವಾ ಸ್ವತ್ತನ್ನು ಭೂ ಸ್ವಾಧೀನ ಮಾಡಿಕೊಳ್ಳುವುದಾಗಿ ಅಧಿಸೂಚನೆ ಹೂರಡಿಸಿವುದನ್ನು ಹೊರತುಪಡಿಸಿ ಅದರ ಸ್ವಾಧೀನವಾಗಲೀ ಪಡೆದಿಲ್ಲ ಹಾಗೇ ನಿಮಗೆ ಭೂ ಸ್ವಾಧೀನಕ್ಕೆ ಯಾವುದೇ ಪರಿಹಾರ ನೀಡಿಲ್ಲ ಎಂದರೆ ಸರಿ. ದಾವಾ ಸ್ವತ್ತನ್ನುನೀವು ಹಾಗೂ ವಾದಿ ಜಂಟಿಯಾಗಿ ಉಳುಮೆ ಮಾಡುತ್ತಿರುವಿರಿ ದಾವಾ ಸ್ವತ್ತಿನ ಅರ್ಧ ಹಿಸ್ಸೆ ವಾದಿಗೆ ಸೇರತಕ್ಕದ್ದು ಎಂದರೆ ಸರಿ. ನಿಮ್ಮ ಭಾಗಕ್ಕೆ ಬರಬೇಕಾದ ಅರ್ಧ ಹಿಸ್ಸೆಯಲ್ಲಿ ಪ್ರತಿವಾದಿ 3 ಮತ್ತು 4 ರವರಿಗೆ ಭಾಗ ಇರುತ್ತದೆ ಎಂದರೆ ಸರಿ.

ನೀವು ವಾದಿಗೆ ದಾವಾ ಸ್ವತ್ತಿನಲ್ಲಿ ಭಾಗವನ್ನು ಕೊಡಲು ನಿರಾಕರಿಸಿರುವಿರಿ ಎಂದರೆ ಸರಿಯಲ್ಲ . ಅದ ಕಾರಣ ಈ ದಾವೆ ಹೂಡಿರುವರು ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿರುವಿರಿ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ
ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

**II** ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್ .ಸಿ
ಪಾಂಡವಪುರ